ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4986
ಸದಸ್ಯರ ಹೆಸರು : ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು)
ಉತ್ತರಿಸಬೇಕಾದ ದಿನಾಂಕ : 13–7–2005
ಉತ್ತರಿಸುವ ಸಚಿವರು : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
1	ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕಿನಲ್ಲಿ ಎಷ್ಟು ಸಮುದಾಯ ಆರೋಗ್ಯ ಕೇಂದ್ರಗಳಿವೆ	2 ಸಮುದಾಯ ಆರೋಗ್ಯ ಕೇಂದ್ರಗಳಿವೆ. ಯಗಟಿ ಹಾಗೂ ಪಂಚನಹಳ್ಳಿ
2.	ಈ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಸಿಬ್ಬಂದಿ ನೇಮಕವಾಗಿದೆಯೇ:	ಹೌದು ನೇಮಕವಾಗಿದೆ
3.	ಔಷಧಿ ಸರಬರಾಜು ಆಗಿದೆಯೆ	ಔಷಧಿ ಸರಬರಾಜು ಆಗಿದೆ.
4.	ಅಗತ್ಯ ಕಟ್ಟಡ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆಯೆ?	ಕ್ರಮ ಕೈಗೊಳ್ಳಲಾಗುವುದು

ಎನ್.ಚಲುವರಾಯಸ್ವಾಮಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ 4986 ಕ್ಕೆ ಪೂರಕ ಟಿಪ್ಪಣಿ

ಚಿಕ್ಕಮಗಳೂರು ಕಡೂರು ತಾಲೂಕಿನಲ್ಲಿ 2 ಸಮುದಾಯ ಆರೋಗ್ಯ ಕೇಂದ್ರಗಳಿವೆ. ಯಗಟಿ ಹಾಗೂ ಪಂಚನಹಳ್ಳಿ ಮತ್ತು ಕಡೂರು ಸಾರ್ವಜನಿಕ ಆಸ್ಪತ್ರೆಯು 100 ಹಾಸಿಗೆಗಳ ಆಸ್ಪತ್ರೆಯಾಗಿದ್ದು, ಕಡೂರು ಆಸ್ಪತ್ರೆಯನ್ನು ಕೆ.ಎಚ್. ಎಸ್‌ಡಿಪಿ ಅಡಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ. ಪಂಚನಹಳ್ಳಿ ಹಾಗೂ ಯಗಟಿ ಈ ಕೇಂದ್ರಗಳು ಸಮುದಾಯ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಲಾಗಿದ್ದು, ಹಳೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿಯೇ ಕಾರ್ಯನಿರ್ವಹಿಸುತ್ತಿವೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ 177 ವೈದ್ಯಾಧಿಕಾರಿಗಳ ಹುದ್ದೆ ಮಂಜೂರಾಗಿದ್ದು, 144 ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 33 ಹುದ್ದೆಗಳು ಖಾಲಿ ಇರುತ್ತವೆ. ಕಡೂರು ತಾಲೂಕಿನಲ್ಲಿರುವ 2 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿಯೂ 2 ವೈದ್ಯಾಧಿಕಾರಿಗಳ ಹುದ್ದೆ ಮಂಜೂರಾಗಿದ್ದು, 2 ವೈದ್ಯಾಧಿಕಾರಿಗಳು ಸಹ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಯಾವುದೇ ಹುದ್ದೆ ಖಾಲಿ ಇರುವುದಿಲ್ಲ. ಸಮುದಾಯ ಆರೋಗ್ಯ ಕೇಂದ್ರದ ಕಾಮಗಾರಿಯು ಪೂರ್ಣಗೊಳಿಸಿದ ನಂತರ ಹೆಚ್ಚಿನ ಸಿಬ್ಬಂದಿಯನ್ನು ಮಂಜೂರು ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಈ ಎರಡು ಸಮುದಾಯ ಆರೋಗ್ಯ ಕೇಂದ್ರಗಳಿಗೆ 2004–05ನೇ ಸಾಲಿನಲ್ಲಿ ತಲಾ ಶೇ.40ರ ಅನುದಾನದಲ್ಲಿ ರೂ. 80,000/– ಹಾಗೂ ಶೇ. 60ರ ಅನುದಾನದಲ್ಲಿ ರೂ. 1,20000/–ರೂ.ಗಳ ಅನುದಾನ ನಿಗದಿಯಾಗಿರುತ್ತದೆ. ಶೇ. 40ರ ಅನುದಾನದಲ್ಲಿ ಸರ್ಕಾರಿ ಔಷಧಿ ಮಳಿಗೆಯಿಂದ ಹಾಗೂ ಜಿಲ್ಲಾ ಔಷಧಿ ಮಳಿಗೆ ಶಿವಮೊಗ್ಗದಿಂದ ರೂ. 64401/– ಹಾಗೂ ಶೇ. 60ರ ಭಾಗದಲ್ಲಿ ಜಿಲ್ಲಾ ಆಕುಕ ಅಧಿಕಾರಿಗಳ ಮುಖಾಂತರ ರೂ. 1,37000/–ಗಳ ಔಷಧಿಯನ್ನು ಪಂಚನಹಳ್ಳಿ ಸಮುದಾಯ ಆರೋಗ್ಯ ಕೇಂದ್ರಕ್ಕೂ ಹಾಗೆಯೇ ಶೇ. 40ರ ಅನುದಾನದಲ್ಲಿ ರೂ. 75,636/–ಗಳ ಹಾಗೂ ಶೇ. 60ರ ಅನುದಾನದಲ್ಲಿ ರೂ. 142000/–ಗಳ ಔಷಧಿಯನ್ನು ಯಗಟಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ವಿತರಿಸಲಾಗಿದೆ.

ತರೀಕೆರೆ ತಾಲೂಕಿನ ಲಕ್ಕವಳ್ಳಿ, ಶಿವನಿ ಹಾಗೂ ಬುಕ್ಕಾಂಬುದಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡಗಳ ಬಗ್ಗೆ ನಬಾರ್ಡ್ ಸಹಾಯದ ಆರ್.ಐ.ಡಿಎಫ್. 11ರ ಯೋಜನೆಯಲ್ಲಿ ಪ್ರಸ್ತಾಪಿಸಲಾಗಿದೆ. ಉಳಿದ ಕಟ್ಟಡಗಳ ಬಗ್ಗೆ ಹಣಕಾಸಿನ ಲಭ್ಯತೆಯನ್ನುನುಸರಿಸಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಂಜೂರಾಗಿರುವ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಅದು ಯಾವ ಇಸವಿಯಲ್ಲಿ ಮಂಜೂರಾಗಿದೆ. ಅಲ್ಲಿ ಏನು ವ್ಯವಸ್ಥೆಯಾಗಿದೆ ಎಂಬುದರ ಬಗ್ಗೆ ಸರಿಯಾಗಿ ಹೇಳಿಲ್ಲ. ಆದರೆ ಈ ಔಷಧಿಯ ವಿಚಾರದಲ್ಲಿ ಶೇಕಡ 40 ಭಾಗ ರಾಜ್ಯ ಸರ್ಕಾರ, ಶೇಕಡ 60 ಭಾಗ ಜಿಲ್ಲಾ ಪಂಚಾಯತ್ ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಅಲ್ಲಿ ಕೊಟ್ಟಿದ್ದರೂ ಕೂಡ ಏತಕ್ಕಾಗಿ ಕೊರತೆಯುಂಟಾಯಿತು

ಎನ್ನುವಂತಹ ವಿಚಾರ ಕೂಡ ಇಲ್ಲಿ ಪ್ರಸ್ತಾಪವಾಗಲಿಲ್ಲ. ಅಲ್ಲಿ ಔಷಧಿಗಳ ಕೊರತೆ ಇದೆ. ಸನ್ಮಾನ್ಯ ಸಚಿವರು ಈ ರೀತಿಯಾಗಿ ಉತ್ತರ ಕೊಡವುದರಿಂದ ಏನು ಉಪಯೋಗವಾಗುವುದಿಲ್ಲ. ಅಲ್ಲಿ ಶಾಸಕರು ಈ ರೀತಿ ಪ್ರಶ್ನೆಯನ್ನು ಕೇಳಿರಬೇಕಾದರೆ ಅದರಲ್ಲಿ ಒಂದು ಗಂಭೀರವಾದ ಪ್ರಶ್ನೆ ಎಂದು ಪರಿಗಣಿಸಿ ಬರೀ ಅಧಿಕಾರಿಗಳಿಂದ ಮಾಹಿತಿಯನ್ನು ತರಿಸಿಕೊಂಡರೆ ಸಾಲದು, ಸಚಿವರೆ ಖುದ್ದಾಗಿ ಮಾಹಿತಿಯನ್ನು ಇನ್ನೊಂದು ಸಾರಿ ಪರಿಶೀಲನೆ ಮಾಡಬೇಕು. ವಾಸ್ತವಾಂಶವನ್ನು ತಿಳಿದುಕೊಂಡು ನಾವು ಪ್ರಶ್ನೆಯನ್ನು ಹಾಕಿರುತ್ತೇವೆ. ಆ ವಾಸ್ತವಾಂಶಕ್ಕೆ ವಿರುದ್ಧವಾಗಿ ಇಲ್ಲಿ ಉತ್ತರಗಳು ಬರುತ್ತವೆ. ಇಲ್ಲಿ ಪ್ರಶ್ನೆಯನ್ನು ಕೇಳಿದರೂ ಕೂಡಾ ಸರಿಯಾದಂತಹ ಉತ್ತರ ಸಿಗದಿದ್ದಾಗ ನಮ್ಮ ಕಾರ್ಯಕ್ರಮಗಳನ್ನು ಮಾಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ಮಾನ್ಯ ಆರೋಗ್ಯ ಸಚಿವರು ಮುಂದೆ ಸರಿಪಡಿಸಿಕೊಡುತ್ತೇವೆಂದು ಹೇಳಿದ್ದಾರೆ. ಏನಾಗಿದೆ ಎಂದರೆ ಅಗತ್ಯ ಕಟ್ಟಡ ನಿರ್ಮಾಣ ಮಾಡಲು ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಅವರು ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ. ಏನು ಹಿಂದೆ ಘಟಕದ ಒಂದು ಕಟ್ಟಡ ಇತ್ತೋ ಅದರಲ್ಲಿ ಆಸ್ಪತ್ರೆಗಳು ನಡೆಯುತ್ತಿದೆ. ಅಲ್ಲಿ ಒಬ್ಬರು ವೈದ್ಯರು ಮಾತ್ರ ಕುಳಿತುಕೊಳ್ಳುವುದಕ್ಕೆ ಇರುವುದು. ಇಬ್ಬರು ವೈದ್ಯರಿಗೂ ಕೂಡ ಅಲ್ಲಿ ಸ್ಥಳಾವಕಾಶವಿಲ್ಲ. ಅದನ್ನು ಎಷ್ಟು ಬೇಗ ಕಟ್ಟಡ ನಿರ್ಮಾಣ ಮಾಡುತ್ತಾರೆ, ಯಾವಾಗ ಮಂಜೂರು ಮಾಡುತ್ತಾರೆ ಅದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಸಮುದಾಯ ಆರೋಗ್ಯ ಕೇಂದ್ರಗಳ ಸಿಬ್ಬಂದಿ ಬಗ್ಗೆ ನಾವು ಹೇಳಿದ್ದೇವೆ. ನೇಮಕಾತಿ ವಿಚಾರದಲ್ಲಿ ಆ ಎರಡು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಯಾವುದೇ ಡಾಕ್ಟರ್‌ಗಳ ಕೊರತೆ ಇಲ್ಲ. ಸಿಬ್ಬಂದಿಯ ಕೊರತೆಯೂ ಕೂಡ ಇಲ್ಲ. ಪೂರ್ತಿ ಸಂಪೂರ್ಣವಾಗಿ ಭರ್ತಿಯಾಗಿದೆ. ಔಷಧಿ ಸರಬರಾಜು ವಿಚಾರದಲ್ಲಿ 40 ಪರ್ಸೆಂಟ್ 60 ಪರ್ಸೆಂಟ್ ಸರಬರಾಜು ಮಾಡುವುದರ ಜೊತೆಗೆ ನಾನು ಈಗಾಗಲೇ ಎಲ್ಲಾ ಮೀಟಿಂಗ್‌ನಲ್ಲೂ ಸಹ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಎಲ್ಲಿ ಅಕಸ್ಮಿಕವಾಗಿ ನಮ್ಮ ಹೆಗಡೆಯವರು ಹೇಳಿದ ಹಾಗೆ ಕೆಲವೊಮ್ಮೆ ಹೆಚ್ಚು ರೋಗಿಗಳು ಬಂದಾಗ ಕೊರತೆ ಆದರೆ ಖಂಡಿತ ಅದನ್ನು ಮತ್ತೆ ರಿಕ್ವೆಸ್ಟ್ ಮಾಡಿದರೆ ಯಾವುದೇ ತರಹದ ಔಷಧಿಯನ್ನು ಸರಬರಾಜು ಮಾಡುವುದಕ್ಕೆ ನಮ್ಮಲ್ಲಿ ರಿಸ್ಟ್ರಿಕ್ಷನ್ ಏನೂ ಇಲ್ಲ. ಅದನ್ನು ನಾವು ಮಾಡುತ್ತೇವೆ.

ಈಗ ನಾವು ಎಲ್ಲಾ ತಾಲ್ಲೂಕು ಮತ್ತು District hospital ಗಳಲ್ಲಿ ಹಿಂದೆ ನಾವು allocation ಮಾಡಿರುವುದನ್ನು ನೋಡಿ ಹೆಚ್ಚುವರಿ ಅವಶ್ಯಕತೆ ಇದೆಯೇ ಎನ್ನುವುದನ್ನು ನಾವು ಮತ್ತೆ revise ಮಾಡಿ check ಮಾಡಿ ಆ ತರಹ ಇದ್ದರೆ allocation ಅನ್ನೂ ಸಹ ಮುಂದಿನ ದಿನಗಳಲ್ಲಿ ಬದಲಾವಣೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಶಾಸಕರು ನೇರವಾಗಿ Particular ಆಗಿ ಯಾವುದಾದರೂ hospital ನಲ್ಲಿ ಅಥವಾ PHC ನಲ್ಲಿ ಅಥವಾ CHC ನಲ್ಲಿ ಕೊರತೆ ಇದೆ ಎನ್ನುವುದರ

ಬಗ್ಗೆ ಬರವಣಿಗೆಯಲ್ಲಿ ಏನಾದಧೂ ನನಗೆ ಕಳುಹಿಸಿದರೆ, ಅಲ್ಲಿಗೆ ಔಷಧವನ್ನು ಸರಬರಾಜು ಮಾಡಲಿಕ್ಕೆ ತಕ್ಷಣವೇ ಇವತ್ತೇ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. PHC ಇರಬಹುದು ಅಥವಾ CHC ಇರಬಹುದು. ಇಲ್ಲಿ ನಮಗೆ ಜಾಗವನ್ನು ಸಂಪೂರ್ಣವಾಗಿ ಕೊಟ್ಟಿರುತ್ತಾರೋ, ಅಂತಹ ಕಡೆಗಳಲ್ಲಿ ಈ ವರ್ಷ ನಾವು ಆದ್ಯತೆ ಮೇರೆಗೆ ತೆಗೆದುಕೊಳ್ಳುತ್ತಿದ್ದೇವೆ. ಈ ವರ್ಷ ಮತ್ತು ಮುಂದಿನ ವರ್ಷದೊಳಗಡೆ ಎಲ್ಲಾ PHC ಮತ್ತು CHC ಗಳಿಗೆ ಕಟ್ಟಡವನ್ನು ಕಟ್ಟಬೇಕೆನ್ನುವ ತೀರ್ಮಾನವನ್ನು ನಾವು World Bank ನಲ್ಲಿ State grant ನಲ್ಲಿ ತೆಗೆದುಕೊಂಡಿದ್ದೇವೆ. KHSDP ಮೂಲಕ ಈಗಾಗಲೇ 40 RIDF-11 ರಲ್ಲಿ 50 ಕಟ್ಟಡಗಳನ್ನು ಮಂಜೂರಾತಿ ಮಾಡಿದ್ದೇವೆ. ಈಗ ತಾನೆ ನಾನು ಖಾಸಗಿಯವರಿಗೆ ಅವರ ಜೊತೆಗೆ ಮಾತ ನಾಡುವಾಗಲೂ ಸಹ ಹೇಳಿದ್ದೇನೆ. ನಿಖರವಾಗಿ ಎಲ್ಲಿ ನೀವು ಜಾಗ ಇದ್ದೂ ಕಟ್ಟಡ ಇಲ್ಲ ಎಂಬ ಬಗ್ಗೆ ನನಗೆ ಮಾಹಿತಿ ಕೊಡ್ಡರೆ, ನಾನು ಈ ವರ್ಷವೇ ಒಂದೆ ರಡು PHC ಗಳನ್ನು ಅವರ ಕ್ಷೇತ್ರದಲ್ಲಿ ಹೊಸ ಕಟ್ಟಡವನ್ನು ಕಟ್ಟಿಸಿ ಕಡಲಿಕ್ಕೆ ಖಂಡಿತವಾಗಿಯೂ ಪ್ರಯತ್ನ ಪಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ನಾನು ಕೇಳಿದ್ದು, ಸಮುದಾಯ ಆರೋಗ್ಯ ಕೇಂದ್ರಗಳ ಬಗ್ಗೆ ಆದರೆ ಮಾನ್ಯ ಸಚಿವರು PHC ಗಳನ್ನು ನಿರ್ಮಾಣ ಮಾಡಿ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಏನು 60:40ರ ಅನುಪಾತ ಇದೆಯೋ, ಅದರ ಪ್ರಕಾರ 1985ನೇ ಇಸವಿಯಿಂದಲೂ ಕೊಡುತ್ತಿದ್ದಾರೆ. ಅವತ್ತು Out patients ನಲ್ಲಿ 120–150ರವರೆಗೆ ಇದ್ದರು. ಇವತ್ತು ಅವರು 450–500ರವರೆಗೆ ಇದ್ದಾರೆ. ಏನಾದರೂ ಹೆಚ್ಚು ಔಷಧಿಗಳು ಬೇಕು ಎಂದು ಪತ್ರವನ್ನು ನೀಡಿದರೆ, ಅದನ್ನು ನಾನು ಮಾಡಿಕೊಡುತ್ತೇನೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದಷ್ಟು ಬೇಗ ಇದನ್ನು ಮಾಡಿಕೊಡಬೇಕು. ಜಾಗವನ್ನು ಕೊಡಬೇಕೆಂದು ಅವರು ಕೇಳಿದ್ದಾರೆ. ನಾವು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯಿಂದ ಆಸ್ಪತ್ರೆ ನಿರ್ಮಾಣಕ್ಕೆ ಈಗಾಗಲೇ ನಾಲ್ಕು ಎಕರೆಯನ್ನು ಕೊಟ್ಟಿದ್ದೇವೆ. ಯಗಟಿಯಲ್ಲೂ ಕೂಡ ನಾಲ್ಕು ಎಕರೆಯನ್ನು ಕೊಟ್ಟಿದ್ದೇವೆ. 13 ದಾದಿಯರ ಉಪಕೇಂದ್ರಗಳ ಕಟ್ಟಡಗಳನ್ನು ಕಟ್ಟಲಿಕ್ಕೆ ಜಾಗ ಕೊಟ್ಟು ಈಗಾಗಲೇ ಮೂರು ವರ್ಷಗಳಾಯಿತು. ಆದ್ದರಿಂದ , ಯಾವಾಗ ಆ ದಾದಿಯರ ಉಪ ಕೇಂದ್ರಗಳನ್ನು ನಿರ್ಮಾಣ ಮಾಡುತ್ತಾರೆ? ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡ ಕಟ್ಟಿಕೊಡುತ್ತಾರೋ ಇಲ್ಲವೇ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ಕಟ್ಟಿಕೊಡುತ್ತಾರೋ? ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣ ನೀಡಬೇಕೆಂದು ನಾನು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಎನ್. ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡವನ್ನೇ ಕಟ್ಟಿಕೊಡುತ್ತೇವೆ. ಜಾಗದ ಕೊರತೆ ಇಲ್ಲದಿದ್ದರೆ, ಕಟ್ಟಡ ಕಟ್ಟಲಿಕ್ಕೆ ಯಾವುದೇ ತರಹದ ಅಭ್ಯಂತರ ಇಲ್ಲ. ಈ ವರ್ಷ ಮತ್ತು ಮುಂದಿನ

ವರ್ಷ, ಎರಡು ಹಂತಗಳಲ್ಲಿ ಸಂಪೂರ್ಣವಾಗಿ ರಾಜ್ಯದಲ್ಲಿ ಇರತಕ್ಕಂಥ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಿಗೆ ಕಟ್ಟಡವನ್ನು ಕಟ್ಟಬೇಕೆನ್ನುವುದು ಸರ್ಕಾರದ ಆದ್ಯತೆಯಲ್ಲಿದೆ. ಅದರ ಬಗ್ಗೆ ಯಾವುದೇ ವ್ಯತ್ಯಾಸ ಆಗುವುದಿಲ್ಲ ಎನ್ನುವುದನ್ನು ಮತ್ತು revise ಮಾಡುವ ವಿಚಾರದಲ್ಲಿಯೂ ಸಹ, allocation ವಿಚಾರದಲ್ಲಿ ನಾವು ಆದಷ್ಟು ಬೇಗ, ಎಲ್ಲಾ ವರದಿಯನ್ನು ತರಿಸಿ ನಾವು ಮಾಡುತ್ತೇವೆ.

KARNATAKA LEGISLATIVE ASSEMBLY

Starred Question No. : 5784
Name of the Member : Sri Udasi C.M. (Hanagal)
Date of reply : 13-07-2005
Replies by : Minister for Primary and Secondary Education

Sl. No.	Question	Reply
a.	How many Junior colleges have been started during this year ;	22 Government Pre-University Colleges have been started and permission has given to open 225 private un-aided colleges during the year 2005-06.
b.	How many colleges have been sanctioned in Haveri Dist.	One Govt. Pre-University College at Nesvi village, Herederur taluk of Haveri Dist. have been sanctioned during the year 2005-06. Private un-aided Pre-University College have not been sanctioned in Haveri Dist. during the year.
c.	Depending upon the number of students is their any proposal to start college (details to be furnished)	Request have been received to start Pre-University Colleges during this year at Kusanur and Bommanhalli of Hanagal tq. This request have not been considered as there is no funds in the budget